# Phone call between Prime Minister Shri Narendra Modi and H.E. Dr. John Pombe Joseph Magufuli, President of the United Republic of Tanzania

June 12, 2020

---

## ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಮತ್ತು ಯುನೈಟೆಡ್ ರಿಪಬ್ಲಿಕ್ ಆಫ್ ತಾಂಜಾನಿಯಾ ಅಧ್ಯಕ್ಷರಾದ ಶ್ರೇಷ್ಠ ಡಾ. ಜಾನ್ ಪೊಂಬೆ ಜೋಸೆಫ್ ಮಾಗುಫುಲಿ ನಡುವೆ ದೂರವಾಣಿ ಸಂಭಾಷಣೆ

ಜೂನ್ 12, 2020

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಯವರು ಯುನೈಟೆಡ್ ರಿಪಬ್ಲಿಕ್ ಆಫ್ ತಾಂಜಾನಿಯಾ ಅಧ್ಯಕ್ಷರಾದ ಡಾ. ಜಾನ್ ಪೊಂಬೆ ಜೋಸೆಫ್ ಮಾಗುಫುಲಿ ರವರೊಂದಿಗೆ ಇಂದು ದೂರವಾಣಿ ಸಂಭಾಷಣೆ ನಡೆಸಿದ್ದಾರೆ.

ಪ್ರಧಾನ ಮಂತ್ರಿ ಯವರು ಜುಲೈ 2016 ರಲ್ಲಿ ದಾರ್-ಎಸ್-ಸಲಾಮ್ ಭೇಟಿಯನ್ನು ಸಂತೋಷದಿಂದ ನೆನಪಿಸಿಕೊಂಡರು ಮತ್ತು ತಾಂಜಾನಿಯಾದೊಂದಿಗಿನ ಸಾಂಪ್ರದಾಯಿಕವಾಗಿ ಸ್ನೇಹಪರ ಸಂಬಂಧಗಳಿಗೆ ಭಾರತವು ನೀಡುವ ಮಹತ್ವವನ್ನು ಒತ್ತಿ ಹೇಳಿದರು. ತಾಂಜಾನಿಯಾ ಸರ್ಕಾರ ಮತ್ತು ಜನರ ಆಕಾಂಕ್ಷೆಗಳಿಗೆ ಮತ್ತು ಅಗತ್ಯಗಳಿಗೆ ಅನುಗುಣವಾಗಿ ತಾಂಜಾನಿಯಾವನ್ನು ಅದರ ಅಭಿವೃದ್ಧಿ ಪ್ರಯಾಣದಲ್ಲಿ ಪಾಲುದಾರಿಕೆ ಮಾಡುವ ಭಾರತದ ಬದ್ಧತೆಯನ್ನು ಅವರು ಪುನರುಚ್ಚರಿಸಿದರು.

COVID-19 ರ ಹಿನ್ನೆಲೆಯಲ್ಲಿ ತಾಂಜಾನಿಯಾದಿಂದ ಭಾರತೀಯ ನಾಗರಿಕರನ್ನು ಸ್ಥಳಾಂತರಿಸಲು ತಾಂಜಾನಿಯಾದ ಅಧಿಕಾರಿಗಳು ನೀಡಿದ ಸಹಾಯಕ್ಕಾಗಿ ಪ್ರಧಾನ ಮಂತ್ರಿಯವರು ಅಧ್ಯಕ್ಷ ಡಾ.ಮಾಗುಫುಲಿ ರವರಿಗೆ ಧನ್ಯವಾದ ಅರ್ಪಿಸಿದರು.

ನಾಯಕರು ಒಟ್ಟಾರೆ ದ್ವಿಪಕ್ಷೀಯ ಸಂಬಂಧವನ್ನು ಪರಿಶೀಲಿಸಿದರು. ಭಾರತ ಮತ್ತು ತಾಂಜಾನಿಯಾ ನಡುವೆ ಬೆಳೆಯುತ್ತಿರುವ ಅಭಿವೃದ್ಧಿ ಪಾಲುದಾರಿಕೆ, ಶೈಕ್ಷಣಿಕ ಸಂಪರ್ಕಗಳಲ್ಲಿ ಮತ್ತು ವ್ಯಾಪಾರ ಮತ್ತು ಹೂಡಿಕೆಗಳಲ್ಲಿ ಅವರು ತೃಪ್ತಿಯನ್ನು ವ್ಯಕ್ತಪಡಿಸಿದರು ಮತ್ತು ಈ ಪ್ರವೃತ್ತಿಗಳನ್ನು ಇನ್ನಷ್ಟು ವೇಗಗೊಳಿಸುವ ಸಾಧ್ಯತೆಗಳ ಬಗ್ಗೆ ಚರ್ಚಿಸಿದರು.

ಈ ವರ್ಷದ ಕೊನೆಯಲ್ಲಿ ತಾಂಜಾನಿಯಾದಲ್ಲಿ ನಡೆಯಲಿರುವ ರಾಷ್ಟ್ರಪತಿ ಮತ್ತು ಸಂಸದೀಯ ಚುನಾವಣೆಗಳಿಗೆ ಪ್ರಧಾನ ಮಂತ್ರಿಯವರು ಶ್ರೇಷ್ಠ ರಾಷ್ಟ್ರಪತಿ ಮಾಗುಫುಲಿ ಮತ್ತು ತಾಂಜಾನಿಯಾದ ಜನರಿಗೆ ಶುಭ ಹಾರೈಸಿದರು.

**ನವ ದೆಹಲಿ**
**ಜೂನ್ 12, 2020**

DISCLAIMER: This is an approximate translation. The original is available in English on MEA's website and may be referred to as the official press release.